

# ನಾವೂ ನೀವೂ ಸೇರಿ ಕಥನ ಕಟ್ಟುವ ಬನ್ನಿ

■ ಗೌರಿ

ಮುಸ್ಸಂಜೆಯ ಹೊತ್ತು. ಕಳೆದುಹೋದ ಆಕಳಿಗಾಗಿ ಅಲೆದಾಡಿ ದಣಿದಿರುವ ಆ ವೃದ್ಧ, ಕಾಡನಡುವಿನ ಸಣ್ಣ ಬಯಲಿನಲ್ಲಿ ಒಂದು ಹುತ್ತಕ್ಕೊರಗಿ, ಸವತೆಕಾಯಿ ತಿನ್ನುತ್ತ ಕೂತಿದ್ದಾನೆ. ಆಗ ಎಲ್ಲಿಂದಲೋ ಆಕಳ ಕೊರಳ ಗಂಟೆಯ ಸದ್ದು ಕೇಳಿಸುತ್ತದೆ. ಎದ್ದು ನಿಂತು ನೋಡಿದರೆ ಸುತ್ತಲೂ, ಮೆಲ್ಲಮೆಲ್ಲನೆ ಕತ್ತಲ ಸೆರಗೊಳಗೆ ಅವಿತುಕೊಳ್ಳುತ್ತಿರುವ ದಟ್ಟ ಕಾಡು... ದೂರದಲ್ಲಿ ಎತ್ತಿನ ಬೆನ್ನ ಡುಬ್ಬದಂತೆ ಉಬ್ಬಿ ಇಳಿದು ಹಬ್ಬಿರುವ ಗುಡ್ಡಗಳ ಸಾಲು. ಆ ಮುಸ್ಸಂಜೆಯಲ್ಲಿ (ಅದು ಆ ಮುದುಕನ ಬಾಳ ಮುಸ್ಸಂಜೆಯೂ ಹೌದು!) ಕಳೆದುಹೋದ ಕಾಡಲ್ಲಿ ಆಕಳನ್ನು ಎಲ್ಲಿ ಹುಡುಕುವುದು? ಗಂಟೆ ಶಬ್ದದ ಮೂಲಕ ಕರೆದು ಅಣಕಿಸುತ್ತಿರುವ ಕಾಡನ್ನು ಹೇಗೆ ಎದುರಿಸುವುದು? ಅವನು ಹುಡುಕುತ್ತಿರುವುದು ಆಕಳನ್ನು ಮಾತ್ರವೇ?

ಸುತ್ತುಗಟ್ಟಿರುವ ಕಾಡಿನ ನಡುವೆ ಟ್ರ್ಯಾಪ್ಡ್ ಸ್ಥಿತಿಯಲ್ಲಿ ನಿಂತಿರುವ ಆ ಮುದುಕನ ಚಿತ್ರ ನಮ್ಮಲ್ಲಿ ಮೂಡಿಸುವ ಭಾವ — ಕತೆಯಿಂದಲ್ಲ, ನಟನೆಯಿಂದಲ್ಲ, ನಿರೂಪಣೆಯಿಂದಲ್ಲ, ಸಂಭಾಷಣೆಯಿಂತೂ ಇಲ್ಲವೇ ಇಲ್ಲ — ಈ ಎಲ್ಲವನ್ನೂ ಒಳಗೊಂಡೂ ಅವುಗಳನ್ನು ಮೀರಿನಿಂತ ಆ 'ಬಿಂಬ'ದಿಂದಲೇ ಹುಟ್ಟುವಂಥದ್ದು!

***

'ನಿನಗೆ ಗೊತ್ತಿಲ್ಲದಿರುವಂಥದ್ದೇನೋ ಹೇಳುತ್ತಿದ್ದೇನೆ. ಅದನ್ನು ಕೇಳಿಸಿಕೊ. ಅದರ ಬಗ್ಗೆ ಯೋಚಿಸುವ ತ್ರಾಸು ತೆಗೆದುಕೊಳ್ಳಬೇಡ. ಸುಮ್ಮನೇ ಆಯಾ ಕ್ಷಣಕ್ಕೆ ಯಾವ ಸ್ವಿಚ್ಚು ಒತ್ತುತ್ತೇನೋ ಆಯಾ ಭಾವಗಳನ್ನು ವ್ಯಕ್ತಪಡಿಸಿ, ಮನೆಗೆ ಹೋಗು' — ಇದು ಇಂದಿನ ಬಹುತೇಕ ಮುಖ್ಯವಾಹಿನಿ ಸಿನಿಮಾ ನಿರ್ಮಾಣದ ಹಿಂದಿನ ಮನಃಸ್ಥಿತಿ.

ಇದಕ್ಕೆ ಹೊರತಾಗಿ, 'ಸಹೃದಯನೂ ನನ್ನಷ್ಟೇ ಬುದ್ಧಿವಂತ, ವಿವೇಕಶಾಲಿ. ಅವನು ನನ್ನ ಸಮಸಮ ಎಂಬ ಗೌರವದೊಂದಿಗೇ ಸಂವಾದಿಸುತ್ತೇನೆ' ಎಂಬ ಮನಃಸ್ಥಿತಿಯೊಂದಿಗೆ ಸಿನಿಮಾ (ಇದನ್ನು ಯಾವ ಕಲಾಕೃತಿಗೂ ಅನ್ವಯಿಸಬಹುದು) ಕಟ್ಟುವವರ



**ಹೆಸರು:** ನಮಗೆ ನಾವು; ಗೋಡೆಗೆ ಮಣ್ಣು
**ನಿರ್ಮಾಣ:** ಗಣೇಶ ಹೆಗಡೆ
**ನಿರ್ದೇಶನ:** ನಟೇಶ್ ಹೆಗಡೆ
**ಛಾಯಾಗ್ರಹಣ:** ಅಕ್ಷಯ್ ಹೆಗಡೆ, ಶಶಾಂಕ್ ಕೆ.ಎಸ್.
**ತಾರಾಗಣ:** ಪಿ.ವಿ. ಹೆಗಡೆ, ನಾಗರಾಜ ಹೆಗಡೆ, ಗೋಪಾಲ ಹೆಗಡೆ, ಮುಖ್ತರ್ ಪಠಾಣ್
**ಧ್ವನಿ:** ಸುಚಿತ್ರಾ ಭಟ್

ಸಂಖ್ಯೆ ಕಡಿಮೆಯಾದರೂ, ಇದೆ.

ಇವೆರಡಕ್ಕಿಂತಲೂ ಇನ್ನೊಂದು ಹೆಜ್ಜೆ ಮುಂದೆ ಹೋಗಿ, 'ನಾನು ಮತ್ತು ನೀವು (ಪ್ರೇಕ್ಷಕ) ಒಟ್ಟಾಗಿ ಒಂದು ಕಥನವನ್ನು ಕಟ್ಟಲು ಸಾಧ್ಯವೇ ಎಂದು ಪ್ರಯತ್ನಿಸೋಣ ಬನ್ನಿ' ಎನ್ನುವ ಹಾಗೆ ಆಹ್ವಾನಿಸುವ ಕಿರುಚಿತ್ರ ನಟೇಶ ಹೆಗಡೆ ಅವರ 'ನಮಗೆ ನಾವು; ಗೋಡೆಗೆ ಮಣ್ಣು'.

ತಮ್ಮ ಮೊದಲ ಕಿರುಚಿತ್ರ 'ಕುರ್ಲಿ'ಯಲ್ಲಿ ಕಥೆ ಹೇಳುವುದಕ್ಕೆ ಹೆಚ್ಚು ನಿಷ್ಠರಾಗಿದ್ದ ನಟೇಶ್, ಈ ಕಿರುಚಿತ್ರದಲ್ಲಿ ಆ ಜಾಡನ್ನು ಬದಲಿಸಿ ನೋಡುಗನಿಗೆ ಇನ್ನಷ್ಟು ಸ್ಪೇಸ್ ಕೊಟ್ಟು 'ಕಥನಕಟ್ಟುವ' ಪ್ರಯೋಗಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. (ಇದೂ ಕತೆಯನ್ನು ಹೇಳುವ ಇನ್ನೊಂದು ಕ್ರಮವೇ ಬಿಡಿ)

ಸನ್ನಿವೇಶಗಳನ್ನು ಸೃಷ್ಟಿಸುವುದಕ್ಕಿಂತ ಇಮೇಜ್‌ಗಳನ್ನು ಕಟ್ಟುವುದರಲ್ಲಿ ನಿರ್ದೇಶಕರಿಗೆ ಹೆಚ್ಚಿನ ಆಸಕ್ತಿ. ಈ ಕಿರುಚಿತ್ರದ ಛಾಯಾಗ್ರಹಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಗೊತ್ತಾಗುತ್ತದೆ. ಇಲ್ಲಿ ನಟರ ಭಾವಾಭಿವ್ಯಕ್ತಿಗಿಂತ ಅವರು ತೆರೆಯ ಮೇಲೆ ಒಂದು ಇಮೇಜ್ ಭಾಗವಾಗಿ ಯಾವ ರೀತಿ ಪರಿಣಾಮವನ್ನು ಬೀರಬಹುದು ಎಂಬುದರ ಕಡೆಗೇ ಹೆಚ್ಚಿನ ಗಮನ ಇದೆ. ತೀರಾ ಭಾವುಕವಾಗಿ ಕಟ್ಟಬಹುದಾಗಿದ್ದ ಕಥನವೊಂದನ್ನು ನಟರ ಭಾವಾಭಿವ್ಯಕ್ತಿಯನ್ನು ಹುಸಿಬಂಡವಾಳವನ್ನು ಬಿಟ್ಟುಕೊಟ್ಟು ಕಟ್ಟುತ್ತೇನೆ ಎಂದು ಹೊರಡುವಲ್ಲಿಯೇ ನಿರ್ದೇಶಕರ ದಿಟ್ಟತನ ಇದೆ. ಹಾಗಾಗಿ ರಸ್ತೆಯಲ್ಲಿ ನಡೆದಾಡುವ ನಾಯಿ, ಕುಡುಕನನ್ನು ಎತ್ತಿಕೊಂಡು ಬೈಕಿನಲ್ಲಿ ಹೋಗುವವರನ್ನು ನಿರ್ಲಿಪ್ತವಾಗಿ ನೋಡುತ್ತಿರುವ 'ಸಾಮಾಜಿಕ ವ್ಯಕ್ತಿ!', ಗದ್ದೆಯಲ್ಲಿನ ಬೆರ್ಚು ಎಲ್ಲವೂ 'ತಾರಾಗಣ'ದ ಕೆಲಸವನ್ನೇ ನಿರ್ವಹಿಸುತ್ತಿರುತ್ತವೆ.

ಒದ್ದೆ ಅಂಗಳದಲ್ಲಿ ನೆಲ ಜಾರುವ ಜಾಗದಲ್ಲಿ ಅಷ್ಟಷ್ಟು ಅಂತರದಲ್ಲಿ ಚಪ್ಪಡಿಕಲ್ಲುಗಳನ್ನು ಹಾಕಿಟ್ಟಂತೆ, ಅಷ್ಟಷ್ಟು ಅಂತರಬಿಟ್ಟು ಒಂದೊಂದು ಇಮೇಜ್ ಅನ್ನು ಕಟ್ಟಿನಿಲ್ಲಿಸುತ್ತಾ ಹೋಗುತ್ತಾರೆ. ಆ ನಡುವಿನ ಅಂತರವನ್ನು ಹಾರಿ ದಾಟಿಕೊಳ್ಳುವ ಜವಾಬ್ದಾರಿಯನ್ನು ನೋಡುಗನಿಗೇ ಬಿಡುತ್ತಾರೆ. ಇದೊಂದು ಬಗೆಯಲ್ಲಿ ಒಟ್ಟಾರೆ ಕಥನ ನಿರ್ಮಿತಿಯಲ್ಲಿ ಅವನನ್ನೂ ಪಾಲುದಾರನನ್ನಾಗಿ ಮಾಡಿಕೊಳ್ಳುವ ಉಪಾಯವೂ ಹೌದು.

ಸಿನಿಮಾದಲ್ಲಿ ಪ್ರಾದೇಶಿಕತೆಯ ಹುಡುಕುವುದು ನಮ್ಮ ಚಪಲ. ಆದರೆ ಇಲ್ಲಿ ಪ್ರಾದೇಶಿಕತೆಯಲ್ಲಿಯೇ ಸಿನಿಮಾ ಮೂಡಿದೆ. ಅಂದರೆ ಇದು ಎಲ್ಲಿಂದಲೋ ತಂದು ಕೂಡಿಸಿದ್ದಲ್ಲ. ಬದಲಿಗೆ ನಾನು ಓಡಾಡುವ, ನಾನು ಆಳವಾಗಿ ಅರಿತಿರುವ, ನನ್ನ ಆಲೋಚನನಾಕ್ರಮವನ್ನು ರೂಪಿಸಿದ ನೆಲದ ಭಾಷೆಯಲ್ಲಿಯೇ ಇದನ್ನು ಕಟ್ಟದೇ ನಿರ್ವಾಹವಿಲ್ಲ ಎಂಬ ಅನಿವಾರ್ಯತೆಯಲ್ಲಿ ಮೂಡಿದ್ದು.

ಕೃತಕ ಅಮೂರ್ತತೆಯ ಕಸರತ್ತು, ಸಂದೇಶ ಕೊಡುವ ಹುಸಿ ಹವಣಿಕೆ, ತಾಂತ್ರಿಕ ಬುದ್ಧಿವಂತಿಕೆಯ ಮೇಲಾಟಗಳ ಬೋನಿನ ಬಾಗಿಲಿಗೆ ಬಾಲಸಿಕ್ಕಿಸಿಕೊಂಡು ಒದ್ದಾಡುತ್ತಿರುವ ಕನ್ನಡದ ಹಲವು ಯುವ ಸಿನಿಮಾಸಕ್ತರು 'ನಮಗೆ ನಾವೆ; ಗೋಡೆಗೆ ಮಣ್ಣು' ಕಿರುಚಿತ್ರವನ್ನು ಗಮನಿಸಲೇಬೇಕು. ■

ಈ ಕಿರುಚಿತ್ರ ವೀಕ್ಷಣೆಗೆ bit.ly/34AQpqf ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.